## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-05**
**C.W.-07**

| | | |
|---|---|---|
| ಹೆಸರು | : | ವಿನೋದ್ |
| ತಂದೆಯ ಹೆಸರು | : | ಕಿಟ್ಟು |
| ವಯಸ್ಸು | : | 26 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಎನ್.ಆರ್.ಮೊಹಲ್ಲಾ, Mysuru |

**ದಿನಾಂಕಃ 20.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ಕೆಸರೇ ಕುರಿಮಂಡಿ ನಮ್ಮ ಮನೆಯಿಂದ 1 ಕಿ.ಮಿ. ದೂರದಲ್ಲಿದೆ. ಮೃತ ರವಿ ಅಲಿಯಾಸ್ ಬಚ್ಚಾ ನನಗೆ ಗೊತ್ತಿತ್ತು.

2. ದಿಃ15.12.2020 ರಂದು ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ನಾನು ನನ್ನ ಮನೆಯಲ್ಲಿದ್ದಾಗ, ನನ್ನ ಸ್ನೇಹಿತ ನನಗೆ ಫೋನು ಮಾಡಿ, ರವಿ ಎನ್ನುವ ಹುಡುಗ ಇದ್ದನ್ನಲ್ಲಾ, ಅವನ ಮರ್ಡರ್ ಆಗಿದೆ, ಬಂದು ನೋಡು, ಎಂದು ತಿಳಿಸಿದ. ಆಗ ನಾನು ರವಿಯ ಮನೆಯ ಬಳಿಗೆ ಹೋದೆ. ಆತನ ಮನೆ ಕುರಿಮಂಡಿಯ ಹತ್ತಿರ ಇತ್ತು. ಆತನ ಮನೆ ಮೊದಲನೇ ಮಹಡಿಯಲ್ಲಿತ್ತು. ಮನೆಯ ಒಳಗಡೆ ರವಿಯ ಶವ ಇತ್ತು. ಅಲ್ಲಿ ಜನರು ಮತ್ತು ಪೊಲೀಸರು ಇದ್ದರು. ಮನೆಯ ಒಳಗಡೆ ನನ್ನನ್ನು ಬಿಡಲಿಲ್ಲ. ಆಗ ನಾನು ಪೊಲೀಸರಲ್ಲಿ ರಿಕ್ವೆಸ್ಟ್ ಮಾಡಿ ಎರಡು ನಿಮಿಷ ಮುಖ ನೋಡುತ್ತೇನೆ ಎಂದು ಕೇಳಿಕೊಂಡೆ, ಆಗ ನನ್ನನ್ನು ಒಳಗಡೆ ಬಿಟ್ಟರು. ನಾನು ಆತನ ಮನೆಯ ಒಳಗಡೆ ಹೋಗಿ ಆತನ ಶವವನ್ನು ನೋಡಿದೆ. ಶವದ ಪಕ್ಕದಲ್ಲಿ ಖಾಲಿ ಬಾಟಲಿಗಳು ಮತ್ತು ಪ್ಲಾಸ್ಟಿಕ್ ಲೋಟಗಳು, ಸೇದಿ ಬಿಟ್ಟ ಸಿಗರೇಟ್ ತುಂಡುಗಳು, ಬಿಯರ್ ಬಾಟಲುಗಳು, ಖಾಲಿ ಮದ್ಯದ ಟೆಟ್ರಾ ಪ್ಯಾಕೆಟುಗಳು ಅಲ್ಲಿದ್ದವು. ಒಂದು ಪ್ಲಾಸ್ಟಿಕ್ ಲೋಟದಲ್ಲಿ ಒಂದು ದ್ರಾವಣವಿತ್ತು, ಅದನ್ನು ಪೊಲೀಸರು ಇನ್ನೊಂದು ಖಾಲಿ ಬಾಟಲಿಗೆ ಹಾಕಿ ಅಮಾನತು ಪಡಿಸಿಕೊಂಡರು. ಇದಕ್ಕೂ ಮುಂಚೆ ಪೊಲೀಸರು, ನಿನ್ನ ಸಮಕ್ಷಮ ಇಲ್ಲಿರುವ ವಸ್ತುಗಳನ್ನೆಲ್ಲಾ ಜಪ್ತಿ ಮಾಡುತ್ತೇವೆ, ನಂತರ ನೀನು ಸಹಿ ಹಾಕಬೇಕು ಎಂದು ಹೇಳಿದ್ದರು.

ನಂತರ ಅವರು ಹೇಳಿದ್ದಂತೆ, ಆ ರೂಮಿನ ಒಳಗಿದ್ದ ಎಲ್ಲಾ ವಸ್ತುಗಳನ್ನು ಅಮಾನತು ಪಡಿಸಿಕೊಂಡು ನನ್ನ ಸಹಿಯನ್ನು ಪಡೆದರು. ನನ್ನೊಂದಿಗೆ ಆ ಸಮಯದಲ್ಲಿ ಚಾಸಾ-6 ಮತ್ತು 8 ರವರು ಸಹ ಇದ್ದರು.

3. ಅಲ್ಲಿಗೆ ಬೆರಳಚ್ಚು ತಜ್ಞರು ಬಂದಿದ್ದರು, ಪೊಲೀಸ್ ನಾಯಿ ಬಂದಿತ್ತು. ಪೊಲೀಸರು ಮಾಡುತ್ತಿದ್ದ ಪ್ರಕ್ರಿಯೆಗಳು ಮುಗಿಯುವವರೆಗೂ ನಾನು ಅಲ್ಲಿದ್ದೆ.

4. ಶವದ ಕತ್ತಿನಲ್ಲಿ ಹಗ್ಗ ಅಥವಾ ಬಟ್ಟೆಯಿಂದ ಬಿಗಿದ ಗುರುತು ಇತ್ತು ಮತ್ತು ನಾಲಿಗೆ ಹೊರಗೆ ಬಂದಿತ್ತು. ಎಡ ತೊಡೆಯ ಮೇಲೆ ಕೊಯ್ದು ಗುರುತು ಇತ್ತು. ಶವ ಚಾಪೆಯ ಮೇಲೆ ಇತ್ತು. ಎಡಭಾಗದಲ್ಲಿ ಸ್ವಲ್ಪ ರಕ್ತವಿತ್ತು.

5. ರವಿಯ ಕೊಲೆಯಾಗಿರುತ್ತದೆ ಎನ್ನುವ ವಿಷಯ ಗೊತ್ತಾಯಿತು. ನಾನು ಕೆಳಗಿನಿಂದ ರವಿಯ ರೂಮಿಗೆ ಬರುವಾಗ ಅಲ್ಲಿದ್ದ ಜನರು, ಹಿಂದಿನ ರಾತ್ರಿ ರವಿ ಮತ್ತು ಆತನ ಸ್ನೇಹಿತರ ನಡುವೆ ಜಗಳವಾಗಿತ್ತು, ಅವರೇ ಈ ಕೊಲೆಯನ್ನು ಮಾಡಿರಬಹುದು ಎಂದು ಹೇಳುತ್ತಿದ್ದರು. ಆತನ ಸ್ನೇಹಿತರು ಎಂದರೆ ವಿನಯ್ ಮತ್ತು ಇತರರು ಎಂದು ತಿಳಿದುಬಂತು.

6. ನಂತರ ಆ್ಯಂಬುಲೆನ್ಸ್ ಮೂಲಕ ಶವವನ್ನು ಆಸ್ಪತ್ರೆಗೆ ಪೊಲೀಸರು ಕಳುಹಿಸಿಕೊಟ್ಟರು.

7. ಅಲ್ಲಿದ್ದ ವಸ್ತುಗಳನ್ನು ಅಮಾನತು ಪಡಿಸಿಕೊಂಡ ನಂತರ ಪೊಲೀಸರು ಆ ಬರವಣಿಗೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಶವ ಹಾಗೂ ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ-19 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-19(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

8. ಈಗ ತೋರಿಸುತ್ತಿರುವ ಇನ್ನೊಂದು ದಾಖಲಾತಿಯ ಮೇಲೂ ನನ್ನ ಸಹಿ ಇರುತ್ತದೆ. ಅದು ಪೊಲೀಸ್ ನೋಟಿಸ್ ಆಗಿದ್ದು, ಅದನ್ನು ನಿಪಿ-20 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-20(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

9. ಈಗ ತೋರಿಸುತ್ತಿರುವ ನಿಪಿ-2 ಮತ್ತು 3 ಫೋಟೋಗಳಲ್ಲಿ ನಾನು ಇದ್ದೇನೆ. ನಿಪಿ-2 ಫೋಟೋವನ್ನು ರವಿ ಮನೆಯ ಹೊರಭಾಗದಲ್ಲಿ ತೆಗೆಯಲಾಗಿತ್ತು. ನಿಪಿ-3 ಫೋಟೋವನ್ನು ರವಿಯ ಮನೆಯ ಒಳಭಾಗದಲ್ಲಿ ತೆಗೆಯಲಾಯಿತು. ಉಳಿದ ಫೋಟೋಗಳನ್ನು ರವಿಯ ಮನೆಯ ಒಳಭಾಗದಲ್ಲಿ

ತೆಗೆಯಲಾಗಿತ್ತು. ಅವುಗಳನ್ನು ಈಗಾಗಲೇ ನಿಪಿ–4 ರಿಂದ 13 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಆ ದಿನ ಪೊಲೀಸರು ನನ್ನ ಸಮಕ್ಷಮ ಅಮಾನತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಕಿಂಗ್‌ಫಿಶರ್ ಬಿಯರ್ ಬಾಟಲನ್ನು ಪೊಲೀಸರು ಅಂದು ರವಿಯ ಮನೆಯಲ್ಲಿ ಅಮಾನತು ಪಡಿಸಿಕೊಂಡಿದ್ದರು. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಈಗ ನೋಡುತ್ತಿರುವ ಮೂರು ಖಾಲಿ ಟೆಟ್ರಾ ಪ್ಯಾಕೆಟುಗಳನ್ನು ಆ ದಿನ ರವಿಯ ಮನೆಯಲ್ಲಿ ಅಮಾನತು ಪಡಿಸಿಕೊಂಡಿದ್ದರು. ಅವುಗಳನ್ನು ಈಗಾಗಲೇ ಮು.ಮಾ.2 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಈಗ ನೋಡುತ್ತಿರುವ ಕೋಡೇಸ್ ರಮ್ ನ ಟೆಟ್ರಾ ಪ್ಯಾಕೆಟನ್ನು ಆ ದಿನ ರವಿಯ ಮನೆಯಲ್ಲಿ ಅಮಾನತು ಪಡಿಸಿಕೊಂಡಿದ್ದರು. ಅದನ್ನು ಈಗಾಗಲೇ ಮು.ಮಾ.3 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಈಗ ನೋಡುತ್ತಿರುವ ಕೋಕಾಕೋಲಾ ಖಾಲಿ ಬಾಟಲನ್ನು ಆ ದಿನ ರವಿಯ ಮನೆಯಲ್ಲಿ ಅಮಾನತು ಪಡಿಸಿಕೊಂಡಿದ್ದರು. ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಈಗ ನೋಡುತ್ತಿರುವ 6 ಪ್ಲಾಸ್ಟಿಕ್ ಲೋಟಗಳನ್ನು ಆ ದಿನ ರವಿಯ ಮನೆಯಲ್ಲಿ ಅಮಾನತು ಪಡಿಸಿಕೊಂಡಿದ್ದರು. ಅವುಗಳನ್ನು ಈಗಾಗಲೇ ಮು.ಮಾ.5 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಆ ದಿನ ರವಿಯ ಶವದ ಪಕ್ಕದಲ್ಲಿ ಇದ್ದಂತಹ ಟಿ–ಶರ್ಟನ್ನು ಅಮಾನತು ಪಡಿಸಿಕೊಂಡಿದ್ದರು. ಅದನ್ನು ಈಗಾಗಲೇ ಮು.ಮಾ.6 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಈಗ ನೋಡುತ್ತಿರುವ ಸ್ಟೀಲ್ ಲೋಟದಲ್ಲಿ ಇರುವ ಸಿಗರೇಟಿನ ತುಂಡುಗಳನ್ನು ಆ ದಿನ ರವಿಯ ಮನೆಯಲ್ಲಿ ಅಮಾನತು ಪಡಿಸಿಕೊಂಡಿದ್ದರು. ಅವುಗಳನ್ನು ಈಗಾಗಲೇ ಮು.ಮಾ.7 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಒಂದು ಹಸಿರು ಬಣ್ಣದ ಬಿಯರ್ ಬಾಟಲನ್ನು ಅಮಾನತು ಪಡಿಸಿಕೊಂಡಿದ್ದರು. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.10 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅಲ್ಲಿ ಪೊಲೀಸರು, ಚಾಪೆಯನ್ನು ಅಮಾನತು ಪಡಿಸಿಕೊಂಡಿದ್ದರು. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.9 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ–**

10. ನಾನು ಘಟನಾ ಸ್ಥಳಕ್ಕೆ ಹೋದಾಗ ದೂರನ್ನು ಯಾರು ನೀಡಿದ್ದರು ಎಂದು ನಾನು ತಿಳಿದುಕೊಳ್ಳಲಿಲ್ಲ. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ 1 ಕಿ.ಮಿ. ದೂರವಿದೆ ಎನ್ನುವುದು ಸರಿ. ದೂರುದಾರರಾದ ಪುಷ್ಪರಾಜ್ ಮತ್ತು ನಾನು ಒಂದೇ ಜನಾಂಗಕ್ಕೆ ಸೇರಿದವರು ಎನ್ನುವುದು ಸರಿಯಲ್ಲ. ಪುಷ್ಪರಾಜ್ ಯಾರು ಎಂದು ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ನನಗೆ ನೋಟಿಸನ್ನು ನೀಡಿದ್ದರು. ಮೃತ ರವಿ ಯಾವ ಊರಿನವನು

ಎನ್ನುವುದನ್ನು ನಾನು ತಿಳಿದುಕೊಳ್ಳಲಿಲ್ಲ. ಮೃತ ರವಿಯ ಪರಿಚಯ ನಿಮಗೆ ಇರಲಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ, ರಸ್ತೆಯಲ್ಲಿ ನೋಡಿ ಪರಿಚಯವಿತ್ತು ಎನ್ನುತ್ತಾರೆ. ಮೃತ ರವಿಯ ಶವದ ಮೇಲೆ ಏಟಾಗಿದ್ದ ಗುರುತು ಇತ್ತು. ಆತನ ದೇಹದ ಮೇಲೆ ಹಚ್ಚೆಯ ಗುರುತು ಇತ್ತೋ, ಇಲ್ಲವೋ ಎನ್ನುವುದನ್ನು ನಾನು ಗಮನಿಸಿರಲಿಲ್ಲ. ಆತನ ಕೈನಲ್ಲಿ ಬಳೆ ಇತ್ತು. ಆತನ ಟಿ–ಶರ್ಟ್ ಹರಿದಿತ್ತೋ, ಇಲ್ಲವೋ ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಬಿಯರ್ ಬಾಟಲ್ ಕಿಂಗ್ ಫಿಶರ್ ಮತ್ತು ಟೂಬರ್ಗ್ ಕಂಪನಿಯದ್ದಾಗಿದ್ದವು. ಟೂಬರ್ಗ್ ಬಾಟಲ್ ಹಸಿರು ಬಣ್ಣದ್ದಾಗಿತ್ತು ಮತ್ತು ಕಿಂಗ್ ಫಿಶರ್ ಬಾಟಲಿ ಮೆರೂನ್ ಕಲರ್ ರೆಡ್ ಬಾರ್ಡರ್ ಇತ್ತು. ಆ ರೂಮಿನ ಉದ್ದ ಅಡಿ ಎಷ್ಟಿತ್ತು ಎನ್ನುವುದನ್ನು ನನಗೆ ಹೇಳಲು ಆಗುವುದಿಲ್ಲ. ಆ ರೂಮಿನ ಚೆಕ್ಕುಬಂದಿಯನ್ನು ನಾನು ಗಮನಿಸಿರಲಿಲ್ಲ, ಆದ್ದರಿಂದ ಈಗ ನನಗೆ ಹೇಳಲು ಆಗುವುದಿಲ್ಲ. ಆತನಿಗೆ ಆಗಿದ್ದ ಗಾಯದ ಉದ್ದ ಸುಮಾರು 6 ಸೆಂ.ಮಿ. ನಿಂದ 8 ಸೆಂ.ಮೀ. ಇತ್ತು. ನಿಪಿ–19 ಮಹಜರನ್ನು ನನ್ನ ಸಮಕ್ಷಮ ಪೊಲೀಸರು ಬರೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ, ನಾನು ಸ್ಥಳದಲ್ಲಿ ಇದ್ದ ಬಗ್ಗೆ ಫೋಟೋಗಳು ಇವೆ ಎನ್ನುತ್ತಾರೆ. ನಾನು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲಿಗಾಗಿ 1 ಮತ್ತು 3 ನೇ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲು ನಿರಾಕರಿಸಿ ಪಾಟೀಸವಾಲು 'ಇಲ್ಲ' ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.